# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :736 |
| ಉತ್ತರಿಸಬೇಕಾದ ದಿನಾಂಕ | :17.09.2021. |
| ಸದಸ್ಯರ ಹೆಸರು | :ಶ್ರೀ ಕೆ. ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು | :ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು |

| ಕ್ರಸ | ಪ್ರಶ್ನೆ | ಉತ್ತರ |
|---|---|---|
| ಅ) | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಮಂಜೂರಾಗಿರುವ ಒಟ್ಟು ಹುದ್ದೆಗಳೆಷ್ಟು; | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಒಟ್ಟು 257 ಹುದ್ದೆಗಳು ಮಂಜೂರಾಗಿರುತ್ತವೆ. |
| ಆ) | ಇದರಲ್ಲಿ ಭರ್ತಿಯಾದ ಹುದ್ದೆಗಳೆಷ್ಟು; ಖಾಲಿ ಹುದ್ದೆಗಳೆಷ್ಟು;(ವಿವರ ಒದಗಿಸುವುದು) | ಮಂಜೂರಾದ 257 ಹುದ್ದೆಗಳಲ್ಲಿ 106 ಹುದ್ದೆಗಳು ಭರ್ತಿಯಾಗಿದ್ದು, 151 ಹುದ್ದೆಗಳು ಖಾಲಿ ಇರುತ್ತವೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ. |
| ಇ) | ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು? (ವಿವರ ಒದಗಿಸುವುದು) | ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕೆಳಕಂಡ ಕ್ರಮ ವಹಿಸಲಾಗಿದೆ:-<br>• ಗುಂಪು 'ಬಿ' ವೃಂದದ ಸಹಾಯಕ ನಿರ್ದೇಶಕರ 01 (ಒಂದು) ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಸಿಆಸು ಇಲಾಖೆಗೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ.<br>• ದ್ವಿತೀಯ ದರ್ಜೆ ಸಹಾಯಕರ 02 (ಎರಡು) ಹುದ್ದೆಗಳನ್ನು; ಸಹಾಯಕ ಗ್ರಂಥಪಾಲಕರ 01 (ಒಂದು) ಹುದ್ದೆಯನ್ನು ಹಾಗೂ ವಾಹನ ಚಾಲಕರ 03 (ಮೂರು) ನೇರ ನೇಮಕಾತಿ ಹುದ್ದೆಯಲ್ಲಿ 01 (ಒಂದು) ಹುದ್ದೆಯನ್ನು ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.<br>• ಇನ್ನುಳಿದಂತೆ ಖಾಲಿ ಇರುವ 02 (ಎರಡು) ವಾಹನ ಚಾಲಕರ ಹುದ್ದೆಗಳ ಎದುರಾಗಿ ಹೊರಗುತ್ತಿಗೆ ಆಧಾರದ ಮೇರೆಗೆ ವಾಹನ ಚಾಲಕರ ಸೇವೆಯನ್ನು ಪಡೆಯಲಾಗಿದೆ. |

| | | |
|---|---|---|
| | | • ಇಲಾಖೆಯಲ್ಲಿ ಖಾಲಿ ಇರುವ ಗುಂಪು 'ಸಿ' ವೃಂದದ ಪ್ರಥಮ ದರ್ಜೆ ಸಹಾಯಕರು, ಶೀಘ್ರಲಿಪಿಗಾರರು, ದ್ವಿತೀಯ ದರ್ಜೆ ಸಹಾಯಕರು, ಬೆರಳಚ್ಚುಗಾರರ ನೇರ ನೇಮಕಾತಿ ಹುದ್ದೆಗಳನ್ನು ಮತ್ತು ಗುಂಪು 'ಡಿ' ವೃಂದದ ಹುದ್ದೆಗಳನ್ನು ಅನುಕಂಪದ ಆಧಾರದ ಮೇರೆಗೆ ಭರ್ತಿ ಮಾಡುವ ಸಂಬಂಧ ಅಭ್ಯರ್ಥಿಗಳನ್ನು ಹಂಚಿಕೆ ಮಾಡಲು ಕೋರಿ ಬೆಂಗಳೂರು, ಮೈಸೂರು, ಕಲ್ಬುರ್ಗಿ ಮತ್ತು ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.<br>• ಖಾಲಿ ಇರುವ ಮುಂಬಡ್ತಿ ಹುದ್ದೆಗಳನ್ನು ಅರ್ಹ ಅಭ್ಯರ್ಥಿಗಳು ಲಭ್ಯವಾದ ಕೂಡಲೇ ನಿಯಮಾನುಸಾರ ಭರ್ತಿ ಮಾಡಲಾಗುತ್ತಿದೆ. |

ವೈಎಸ್‌ಡಿ/ಇವೈಡಬ್ಲ್ಯೂ/147/2021.

**(ಡಾ|| ಕೆ. ಸಿ. ನಾರಾಯಣಗೌಡ)**
ರೇಷ್ಮೆ, ಯುವ ಸಬಲೀಕರಣ ಮತ್ತು
ಕ್ರೀಡಾ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 736ರ ಅನುಬಂಧ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಮಂಜೂರಾದ, ಕಾರ್ಯ ನಿರ್ವಹಿಸುತ್ತಿರುವ, ಖಾಲಿ ಇರುವ ಹುದ್ದೆಗಳ ವಿವರ ದಿ:09-09-2021 ರಲ್ಲಿದ್ದಂತೆ.

| ಕ್ರಸ | ಹುದ್ದೆಯ ಹೆಸರು | ಮಂಜೂರಾದ ಹುದ್ದೆ | ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ | ಖಾಲಿ ಇರುವ ಹುದ್ದೆಗಳ ಸಂಖ್ಯೆ |
|---|---|---|---|---|
| 1 | ಆಯುಕ್ತರು | 1 | 1 | 0 |
| 2 | ಜಂಟಿ ನಿರ್ದೇಶಕರು | 2 | 2 | 0 |
| 3 | ಉಪ ನಿರ್ದೇಶಕರು | 7 | 2 | 5 |
| 4 | ಸಹಾಯಕ ಕಾರ್ಯಪಾಲಕ ಅಭಿಯಂತರರು | 1 | 1 | 0 |
| 5 | ಸಹಾಯಕ ನಿರ್ದೇಶಕರು | 28 | 21 | 7 |
| 7 | ಲೆಕ್ಕಾಧಿಕಾರಿಗಳು | 1 | 1 | 0 |
| 8 | ಮುಖೋಪಾಧ್ಯಾಯರು | 2 | 1 | 1 |
| 9 | ಹಿರಿಯ ಗ್ರಂಥಪಾಲಕರು | 1 | 1 | 0 |
| 10 | ಸಹಾಯಕ ಅಭಿಯಂತರರು(ಸಿವಿಲ್) | 1 | 0 | 1 |
| 11 | ಸಹಾಯಕ ಅಭಿಯಂತರರು(ಎಲೆಕ್ಟ್ರಿಕಲ್) | 1 | 0 | 1 |
| 12 | ಲೆಕ್ಕಾಧೀಕ್ಷಕರು | 2 | 1 | 1 |
| 13 | ಗ್ರಂಥಪಾಲಕರು | 2 | 1 | 1 |
| 14 | ಅಧೀಕ್ಷಕರು | 34 | 13 | 21 |
| 15 | ತರಬೇತುದಾರರು | 12 | 0 | 12 |
| 16 | ಉಪ ಸಂಪಾದಕರು | 1 | 0 | 1 |
| 17 | ಕಿರಿಯ ಅಭಿಯಂತರರು(ಸಿವಿಲ್) | 1 | 0 | 1 |
| 18 | ಪದವೀಧರ ಶಿಕ್ಷಕರು | 7 | 2 | 5 |
| 19 | ಸಹ ಶಿಕ್ಷಕರು(ಹೊಲಿಗೆ) | 1 | 0 | 1 |
| 20 | ಸಹಾಯಕ ಗ್ರಂಥಪಾಲಕರು | 2 | 0 | 2 |
| 21 | ಶೀಘ್ರಲಿಪಿಗಾರರು | 6 | 3 | 3 |
| 22 | ಪ್ರಥಮ ದರ್ಜೆ ಸಹಾಯಕರು | 14 | 9 | 5 |
| 23 | ತರಬೇತುದಾರರು | 1 | 1 | 0 |
| 24 | ದ್ವಿತೀಯ ದರ್ಜೆ ಸಹಾಯಕರು | 41 | 20 | 21 |
| 25 | ದತ್ತಾಂಶ ನಮೂದು ಸಹಾಯಕ | 6 | 2 | 4 |
| 26 | ವಾಹನ ಚಾಲಕರು | 4 | 1 | 3 |
| 27 | ಲಿಫ್ಟ್ ಅಟೆಂಡರ್ | 2 | 0 | 2 |
| 28 | ಅಟೆಂಡರ್/ಮಾರ್ಕರ್ | 76 | 23 | 53 |
| | **ಒಟ್ಟು** | **257** | **106** | **151** |